ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–1

---

**ಸಂಖ್ಯೆ: ಎಡಿಎಂ2(1)/ಶಿಕ್ಷಕರ ರಾಜ್ಯ ಪ್ರಶಸ್ತಿ/01/2024–25.** **ದಿನಾಂಕ:03–08–2024.**

**–:ಸುತ್ತೋಲೆ:–**

ವಿಷಯ:–2024–25 ನೇ ಸಾಲಿನ " ರಾಜ್ಯ ಮಟ್ಟದ ಉತ್ತಮ ಶಿಕ್ಷಕ " ಪ್ರಶಸ್ತಿಗೆ ಆನ್–ಲೈನ್ ಮೂಲಕ ಅರ್ಜಿ ಆಹ್ವಾನಿಸಿರುವ ಬಗ್ಗೆ ಮತ್ತು ಸಂಪೂರ್ಣ ಪ್ರಕ್ರಿಯೆಯನ್ನು ಆನ್–ಲೈನ್ ಮುಖಾಂತರ ನಿರ್ವಹಿಸುವ ಬಗ್ಗೆ.

ಉಲ್ಲೇಖ:–1)ಸರ್ಕಾರದ ಪತ್ರ ಸಂಖ್ಯೆ ಇಡಿ: 385 ಪಿಬಿಎಸ್ 2018 ದಿನಾಂಕ:25.08.2018.
2)ಸರ್ಕಾರದ ಪತ್ರ ಸಂಖ್ಯೆ ಇಡಿ: 394 ಪಿಬಿಎಸ್ 2018 ದಿನಾಂಕ:27.08.2018/19.
3)ಸರ್ಕಾರದ ಪತ್ರ ಸಂಖ್ಯೆ ಇಪಿ: 45 ಪಿಬಿಎಸ್ 2019 ದಿನಾಂಕ:31.07.2019.
4)ಸರ್ಕಾರದ ಪತ್ರ ಸಂಖ್ಯೆ: ಇಪಿ 45 ಪಿಬಿಎಸ್ 2019 ದಿನಾಂಕ:31.08.2021.
5)ಸರ್ಕಾರದ ಪತ್ರ ಸಂಖ್ಯೆ: ಇಪಿ 45 ಪಿಬಿಎಸ್ 2019 ದಿನಾಂಕ:28.12.2021.

*********

ತರಗತಿ ಕೋಣೆಯಲ್ಲಿ ವಿಷಯ ಪಾಂಡಿತ್ಯದ ಜೊತೆಗೆ ಪೂರಕ ಪರಿಕರಗಳೊಂದಿಗೆ ಬೋಧನಾ ಚಟುವಟಿಕೆಗಳನ್ನು ಸಾದರಪಡಿಸಿ ಮಕ್ಕಳಲ್ಲಿ ಶಾಶ್ವತ ಮತ್ತು ಸಂತಸದಾಯಕ ಕಲಿಕೆಯನ್ನುಂಟು ಮಾಡುವ ಬಹುಮುಖ ವ್ಯಕ್ತಿತ್ವದ ಶಿಕ್ಷಕರನ್ನು, ಉಪನ್ಯಾಸಕರನ್ನು, ಮುಖ್ಯ ಶಿಕ್ಷಕರನ್ನು ಹಾಗೂ ಪ್ರಾಂಶುಪಾಲರನ್ನು ಗುರ್ತಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿ ವರ್ಷ ಸೆಪ್ಟೆಂಬರ್–05 ರಂದು ಕ್ರಮವಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪ್ರದಾನ ಮಾಡುವುದರ ಮೂಲಕ ಗೌರವಿಸುತ್ತಿವೆ.

ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಅಹರ್ನಿಶಿ ತೊಡಗಿಸಿ ಕೊಳ್ಳುವ ಹಲವು ಅತ್ಯುತ್ತಮ ಶಿಕ್ಷಕರು, ವಿಶೇಷ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಲೆ ಮರೆಯ ಕಾಯಿಯಂತೆ ಇದ್ದು, ಅಂತಹ ತೆರೆಮರೆಯ ಸಾಧಕರನ್ನು ಸ್ವಯಂಪ್ರೇರಿತವಾಗಿ ಗುರುತಿಸಿ ಸದರಿ ಪ್ರಶಸ್ತಿಗಳನ್ನು ಪ್ರದಾನ ಮಾಡಬೇಕೆನ್ನುವುದು ಸರ್ಕಾರದ ಮತ್ತು ಶಾಲಾ ಶಿಕ್ಷಣ ಇಲಾಖೆಯ ಆಶಯವಾಗಿರುತ್ತದೆ. ಇದರಿಂದಾಗಿ ರಾಜ್ಯದ ಶಿಕ್ಷಕ ವೃಂದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಮತ್ತಷ್ಟು ಹುರುಪಿನಿಂದ ತೊಡಗಿಸಿಕೊಳ್ಳಲು ಪ್ರೇರೇಪಣೆಯನ್ನು ಮತ್ತು ಉತ್ತೇಜನವನ್ನು ಒದಗಿಸಿದಂತಾಗುತ್ತದೆ. ಈ ನಿಟ್ಟಿನಲ್ಲಿ ಸಕಾಲಿಕ ಕ್ರಮಗಳನ್ನು ವಹಿಸಬೇಕಾಗಿರುವುದು ಸಂಬಂಧಿಸಿದ ಇಲಾಖಾಧಿಕಾರಿಗಳ ಆದ್ಯ ಕರ್ತವ್ಯ ಹಾಗೂ ಪ್ರಮುಖ ಹೊಣೆಗಾರಿಕೆಯಾಗಿರುತ್ತದೆ. ಅದರಂತೆ, ಸದರಿ ಅಂಶಗಳ ಕುರಿತು ಈ ಸುತ್ತೋಲೆಯಲ್ಲಿರುವ ಮಾರ್ಗದರ್ಶಿ ಸೂತ್ರಗಳನ್ನು ಪರಿಪಾಲಿಸಲು ತಿಳಿಸಿದೆ.

ಪ್ರಯುಕ್ತ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರು ಅರ್ಹ ಶಿಕ್ಷಕರನ್ನು, ಉಪನ್ಯಾಸಕರನ್ನು, ಮುಖ್ಯ ಶಿಕ್ಷಕರನ್ನು ಹಾಗೂ ಪ್ರಾಂಶುಪಾಲರನ್ನು ರಾಷ್ಟ್ರ ಮಟ್ಟದ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಆಯ್ಕೆ ಮಾಡಲು 2018 ರಿಂದ ಜಾರಿಗೆ ತಂದಿರುವ ಆನ್–ಲೈನ್ ವ್ಯವಸ್ಥೆಯ ಮಾದರಿಯಲ್ಲಿಯೇ, ರಾಜ್ಯದಲ್ಲಿಯೂ ಸಹ ರಾಜ್ಯ ಮಟ್ಟದ ಉತ್ತಮ

ಶಿಕ್ಷಕ ಪ್ರಶಸ್ತಿಗೆ ಅರ್ಹ ಶಿಕ್ಷಕರನ್ನು, ವಿಶೇಷ ಶಿಕ್ಷಕರನ್ನು ಹಾಗೂ ಮುಖ್ಯ ಶಿಕ್ಷಕರನ್ನು ಆಯ್ಕೆ ಮಾಡಲು ಆನ್-ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಿ, ಪ್ರಶಸ್ತಿ ಆಯ್ಕೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್-ಲೈನ್ ಮೂಲಕವೇ ನಿರ್ವಹಿಸಲು ಉಲ್ಲೇಖ-01 ರಂತೆ ಸರ್ಕಾರವು ಅನುಮತಿಯನ್ನು ನೀಡಿರುತ್ತದೆ. ಈ ಪ್ರಕಾರ ಕಳೆದ ಐದು ವರ್ಷಗಳಿಂದ ಸದರಿ ಪ್ರಕ್ರಿಯೆಯನ್ನು ನಿರ್ವಹಿಸಲಾಗುತ್ತಿದೆ.

ಈ ಪ್ರಶಸ್ತಿಗೆ ಆಯ್ಕೆ ಪ್ರಕ್ರಿಯೆಯನ್ನು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕೈಗೊಳ್ಳಲು ಉಲ್ಲೇಖ-02 ರಿಂದ 05 ರವರೆಗಿನ ಸರ್ಕಾರದ ಪತ್ರಗಳಂತೆ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಆಯ್ಕೆ ಸಮಿತಿಗಳನ್ನು ಕೆಳಕಂಡಂತೆ ರಚಿಸಲಾಗಿದೆ ಮತ್ತು ಪುನರ್-ರಚಿಸಲಾಗಿದೆ.

ಅದರಂತೆ, 2024-25 ನೇ ಸಾಲಿನ ರಾಜ್ಯಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಅರ್ಹ ಶಿಕ್ಷಕರು, ವಿಶೇಷ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಶಾಲಾ ಶಿಕ್ಷಣ ಇಲಾಖೆಯ ಆನ್-ಲೈನ್ ಪೋರ್ಟಲ್ **http://www.schooleducation.kar.nic.in** ರ ಮೂಲಕ ಅರ್ಜಿಯನ್ನು ಸಲ್ಲಿಸುವ ಪ್ರಕ್ರಿಯೆಯಿಂದ ಪ್ರಾರಂಭವಾಗಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗಳ ಶಿಫಾರಸ್ಸು ಪ್ರಕ್ರಿಯೆ ಹಾಗೂ ರಾಜ್ಯ ಮಟ್ಟದ ಆಯ್ಕೆ ಸಮಿತಿ ಕೈಗೊಳ್ಳುವ ಅಂತಿಮ ಆಯ್ಕೆಪಟ್ಟಿಯವರೆಗಿನ ಎಲ್ಲಾ ಹಂತಗಳನ್ನು / ಪ್ರಕ್ರಿಯೆಗಳನ್ನು ಕೆಳಕಂಡ ವೇಳಾಪಟ್ಟಿಯ ಅನುಸಾರ ಸಂಪೂರ್ಣವಾಗಿ ಆನ್-ಲೈನ್ ಮೂಲಕ ನಡೆಸಲು ಉದ್ದೇಶಿಸಲಾಗಿದೆ.

## ವೇಳಾಪಟ್ಟಿ.

| ಕ್ರಮ ಸಂಖ್ಯೆ. | ಪ್ರಕ್ರಿಯೆಯ ವಿವರ. | ನಿಗದಿಪಡಿಸಿರುವ ದಿನಾಂಕ. |
|---|---|---|
| **01.** | ಅರ್ಹ ಶಿಕ್ಷಕರು, ವಿಶೇಷ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಅವಧಿ. | ದಿನಾಂಕ: **03-08-2024** ರಿಂದ **16-08-2024** ರವರೆಗೆ. |
| **02.** | ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಗಳಿಗೆ ನಿಗದಿಪಡಿಸಿರುವ ಅವಧಿ. | ದಿನಾಂಕ: **17-08-2024** ರಿಂದ **21-08-2024** ರವರೆಗೆ. |
| **03.** | ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗಳಿಗೆ ನಿಗದಿಪಡಿಸಿರುವ ಅವಧಿ. | ದಿನಾಂಕ: **22-08-2024** ರಿಂದ **27-08-2024** ರವರೆಗೆ. |
| **04.** | ರಾಜ್ಯ ಮಟ್ಟದ ಆಯ್ಕೆ ಸಮಿತಿಗೆ ನಿಗದಿಪಡಿಸಿರುವ ಅವಧಿ. | ದಿನಾಂಕ: **28-08-2024** ರಿಂದ **30-08-2024** ರವರೆಗೆ. |
| **05.** | ಸರ್ಕಾರಕ್ಕೆ ವರದಿ ಮಾಡುವುದು. | ದಿನಾಂಕ: **31-08-2024** ರಂದು. |
| **06.** | ಪ್ರಶಸ್ತಿ ವಿಜೇತರಿಗೆ ಮಾಹಿತಿ ನೀಡುವುದು. | ದಿನಾಂಕ: **03-09-2024** ರಂದು. |
| **07.** | ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ. | ದಿನಾಂಕ: **05-09-2024** ರ ಗುರುವಾರದಂದು. |

2024-25 ನೇ ಸಾಲಿನ " ರಾಜ್ಯ ಮಟ್ಟದ ಉತ್ತಮ ಶಿಕ್ಷಕ " ಪ್ರಶಸ್ತಿಗೆ ಆಯ್ಕೆಯಾಗ ಬಯಸಿ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಶಿಕ್ಷಕರಿಗೆ, ವಿಶೇಷ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರಿಗೆ ಇರಬೇಕಾದ ಅರ್ಹತೆಗಳು ಮತ್ತು ಅನುಸರಿಸಬೇಕಾದ ಕಾರ್ಯ ವಿಧಾನ ಕೆಳಕಂಡಂತಿದೆ.

**ಅರ್ಹತೆಗಳು.**

1. ಕರ್ನಾಟಕ ರಾಜ್ಯದ, ಶಾಲಾ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಾಥಮಿಕ ಅಥವಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಯಂ ಆಗಿ ನೇಮಕವಾಗಿ / ಅನುದಾನಿತ ಪ್ರಾಥಮಿಕ ಅಥವಾ ಅನುದಾನಿತ ಪ್ರೌಢಶಾಲೆಗಳಲ್ಲಿ ಅನುದಾನಸಹಿತವಾಗಿ ಅನುಮೋದನೆಗೊಂಡು ಕನಿಷ್ಠ ಹತ್ತು ವರ್ಷಗಳ (ದಿನಾಂಕ:03.08.2024 ರಲ್ಲಿದ್ದಂತೆ) ತೃಪ್ತಿದಾಯಕ ಸೇವೆಯನ್ನು ಸಲ್ಲಿಸಿರುವ ಹಾಗೂ ಇದರಲ್ಲಿ, ಕಳೆದ ಐದು ವರ್ಷಗಳಿಂದ ಶಾಲೆಯಲ್ಲಿ ಬೋಧನೆಯನ್ನು ಮಾಡುತ್ತಿರುವ ಶಿಕ್ಷಕರು, ದೈಹಿಕ ಶಿಕ್ಷಕರು, ವಿಶೇಷ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಈ ಪ್ರಶಸ್ತಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
2. ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಶಿಕ್ಷಕರು, ದೈಹಿಕ ಶಿಕ್ಷಕರು, ವಿಶೇಷ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ತಮ್ಮ ವೈಯಕ್ತಿಕ, ಶೈಕ್ಷಣಿಕ ಮತ್ತು ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ಒಳಗೊಂಡ ಸಮಗ್ರ ಮಾಹಿತಿಯನ್ನು, ಕಳೆದ ಐದು ವರ್ಷಗಳ ಅಂಕಿ-ಅಂಶಗಳನ್ನು ಆನ್-ಲೈನ್ ಅರ್ಜಿಯ ಮೂಲಕ ನಿಗದಿತ ಅವಧಿಯಲ್ಲಿ ಸಲ್ಲಿಸಬೇಕು. ಇದರಲ್ಲಿ ಕೋವಿಡ್-19 ರ ಶೈಕ್ಷಣಿಕ ವರ್ಷಗಳಲ್ಲಿ ಸರ್ಕಾರ ಮತ್ತು ಶಾಲಾ ಶಿಕ್ಷಣ ಇಲಾಖೆ ನಿಗದಿಪಡಿಸಿದ್ದ ಪರ್ಯಾಯ ಮಾರ್ಗಗಳ ಮೂಲಕ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಕಾರ್ಯಪ್ರವೃತ್ತರಾಗಿರಬೇಕು.
3. ಯಾವುದೇ ಗಂಭೀರ ಆರೋಪ, ಶಿಸ್ತು ಪ್ರಕರಣ, ಕ್ರಿಮಿನಲ್ ಪ್ರಕರಣ, ಇಲಾಖಾ ವಿಚಾರಣೆ ಮತ್ತು ಸೇವಾ ವಿಷಯಗಳಿಗೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣವನ್ನು ಎದುರಿಸುತ್ತಿರುವವರು ಹಾಗೂ ವ್ಯತಿರಿಕ್ತ ಷರಾ ಇರುವವರು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.
4. ಈಗಾಗಲೇ ರಾಜ್ಯ / ರಾಷ್ಟ್ರ ಪ್ರಶಸ್ತಿ ಪಡೆದಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವಂತಿಲ್ಲ.

**ಅರ್ಜಿ ಸಲ್ಲಿಸುವ ಕಾರ್ಯ ವಿಧಾನ.**

01. ಅರ್ಜಿ ಸಲ್ಲಿಸುವ ಮುನ್ನ ಶಾಲಾ ಶಿಕ್ಷಣ ಇಲಾಖೆಯ ಅಂತರ್ಜಾಲ ತಾಣ (ವೆಬ್ ಸೈಟ್) **http://www.schooleducation.kar.nic.in** ದ ಮುಖಪುಟದಲ್ಲಿರುವ ಈ ಸುತ್ತೋಲೆ ಮತ್ತು ತತ್ಸಂಬಂಧಿ ಬಳಕೆದಾರರ ಕೈಪಿಡಿ (**USER MANUAL**) ಯನ್ನು ಸಂಪೂರ್ಣವಾಗಿ ಓದಿ ಮನನ ಮಾಡಿಕೊಳ್ಳುವುದು.

02. ನಂತರ ಶಾಲಾ ಶಿಕ್ಷಣ ಇಲಾಖೆಯ **http://www.schooleducation.kar.nic.in** ಅಂತರ್ಜಾಲ ತಾಣದ ಮುಖ ಪುಟದ ಬಲ ಭಾಗದಲ್ಲಿರುವ " ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ " ಎಂಬ ಕೊಂಡಿಯನ್ನು (ಲಿಂಕ್) ಕ್ಲಿಕ್ ಮಾಡಿ ವೆಬ್-ಪೋರ್ಟಲ್‌ನ ಲಾಗಿನ್ ಪುಟಕ್ಕೆ ಭೇಟಿ ನೀಡುವುದು. ಅಲ್ಲಿ ತಮ್ಮ ಎಂಪ್ಲಾಯಿ ಐಡಿ (ಕೆ.ಜಿ.ಐ.ಡಿ ಸಂಖ್ಯೆ / ಎಲ್.ಐ.ಸಿ ವಿಮಾ ಸಂಖ್ಯೆ) ಯನ್ನು, ಇ.ಇ.ಡಿ.ಎಸ್‌ನಲ್ಲಿ ದಾಖಲಿಸಿರುವ ತಮ್ಮ ಮೊಬೈಲ್‌ಗೆ ಬರುವ **One Time Password (O.T.P)** ಯನ್ನು ಹಾಗೂ ಈ ವೆಬ್ ಸ್ಕ್ರೀನ್‌ನಲ್ಲಿ ಕಾಣುವ ಸೆಕ್ಯುರಿಟಿ ಕೋಡ್ ಇವುಗಳನ್ನು ನಮೂದಿಸಿ ಲಾಗಿನ್ ಆಗಬೇಕು. ಒಂದು ವೇಳೆ, ಇ.ಇ.ಡಿ.ಎಸ್‌ನಲ್ಲಿ ದಾಖಲಿಸಿರುವ ತಮ್ಮ ಮೊಬೈಲ್ ಸಂಖ್ಯೆ ಬದಲಾಗಿದ್ದಲ್ಲಿ, ಹಣ ಸೆಳೆಯುವ & ಬಟವಾಡೆ (ಡಿ.ಡಿ.ಒ) ಅಧಿಕಾರಿಯ

ಮೂಲಕ ಲಿಖಿತ ಮನವಿಯನ್ನು teacheraward2024@gmail.com ಗೆ ಕಳುಹಿಸಿದಲ್ಲಿ, ಮೊಬೈಲ್ ಸಂಖ್ಯೆಯನ್ನು ಇಂಧೀಕರಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.

03. ಅನುಬಂಧ-01 ರಲ್ಲಿ ನೀಡಲಾಗಿರುವ ಮಾದರಿ ಅರ್ಜಿ ನಮೂನೆಯನ್ನು ಪರಾಮರ್ಶಿಸಿ ಅದರಂತೆ ತಮ್ಮ ವೈಯಕ್ತಿಕ ಮತ್ತು ಸೇವಾ ವಿವರಗಳು, ಸೇವಾವಧಿಯಲ್ಲಿ ಮಾಡಿರುವ ವಿಶೇಷ ಸಾಧನೆಗಳು ಹಾಗೂ ಕೋವಿಡ್-19 ರ ಅವಧಿಯ ಶೈಕ್ಷಣಿಕ ಸಾಲುಗಳಲ್ಲಿ ಸರ್ಕಾರ ಮತ್ತು ಶಾಲಾ ಶಿಕ್ಷಣ ನಿಗದಿಪಡಿಸಿದ ಪರ್ಯಾಯ ಮಾರ್ಗಗಳ ಮೂಲಕ ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ವಹಿಸಲಾಗಿರುವ ಕ್ರಮಗಳ ವಿವರಗಳನ್ನು ಒಳಗೊಂಡ 02 ಎಂ.ಬಿ ಗೆ ಮೀರದ ಪೂರಕ ದಾಖಲೆಗಳೊಂದಿಗೆ (ಆಡಿಯೋ,ವೀಡಿಯೋ,ಫೋಟೋಗಳು ಇತ್ಯಾದಿ...) ನಿಗದಿತ ಅವಧಿಯಲ್ಲಿ ಕಡ್ಡಾಯವಾಗಿ ಆನ್-ಲೈನ್‌ನಲ್ಲಿ ಮೂಲಕ ಅರ್ಜಿಗಳನ್ನು ಸಲ್ಲಿಸಬೇಕು.

04. ಹೀಗೆ ಅರ್ಜಿ ಸಲ್ಲಿಸುವಾಗ ಅರ್ಜಿಯಲ್ಲಿನ ಅಂಶಗಳಿಗೆ ಯೂನಿಕೋಡ್‌ನಲ್ಲಿ ವಿವರಣೆಯನ್ನು ಹಾಗೂ ಅದಕ್ಕೆ ಅನುಗುಣವಾಗಿ ಪೂರಕ ದಾಖಲೆಗಳನ್ನು ಹಾಗೂ ಲಿಂಕ್‌ಗಳನ್ನು ಆಯಾ ಅಂಶಗಳ ಎದುರಿನಲ್ಲಿ ಆನ್-ಲೈನ್ ನಲ್ಲಿ (ತಾಂತ್ರಿಕ ಅಡಚಣೆಗಳು ಉಂಟಾಗದೇ, ಸುಸೂತ್ರವಾಗಿ ವೀಕ್ಷಿಸುವ ರೀತಿಯಲ್ಲಿ) ಅಪ್-ಲೋಡ್ ಮಾಡಬೇಕು. ಅರ್ಜಿಯಲ್ಲಿ ಅಗತ್ಯವಿಲ್ಲದೇ ಯಾವುದೇ ಅಂಶವನ್ನು, ವಿವರಣೆಯನ್ನು, ದಾಖಲೆಗಳನ್ನು, ಆಡಿಯೋಗಳನ್ನು, ವೀಡಿಯೋಗಳನ್ನು ಅಪ್-ಲೋಡ್ ಮಾಡಬಾರದು ಹಾಗೂ ಪುನರಾವರ್ತನೆ ಮಾಡಬಾರದು. ಒಂದು ವೇಳೆ, ಅರ್ಜಿದಾರರು ಅಪ್-ಲೋಡ್ ಮಾಡಿರುವ ವಿವರಣೆಗಳು, ದಾಖಲೆಗಳು, ಆಡಿಯೋಗಳು ಹಾಗೂ ವೀಡಿಯೋಗಳು ತಾಂತ್ರಿಕ ದೋಷಗಳಿಂದ ಕೂಡಿದ್ದು, ವೀಕ್ಷಣೆ ಸಾಧ್ಯವಾಗದಿದ್ದಲ್ಲಿ, ಅದನ್ನು ಮೌಲ್ಯಮಾಪನದಲ್ಲಿ ಪರಿಗಣಿಸುವುದಿಲ್ಲ. ಅರ್ಜಿದಾರರ ಈ ಅಚಾತುರ್ಯಕ್ಕೆ ಸರ್ಕಾರ ಮತ್ತು ಶಾಲಾ ಶಿಕ್ಷಣ ಇಲಾಖೆ ಹಾಗೂ ಯಾವುದೇ ಹಂತದ ಆಯ್ಕೆ ಸಮಿತಿ ಜವಾಬ್ದಾರರಾಗಿರುವುದಿಲ್ಲ.

05. ಅರ್ಜಿದಾರರು ಸದರಿ ಅರ್ಜಿಯಲ್ಲಿ ತಾವು ಸಲ್ಲಿಸಿರುವ ಎಲ್ಲಾ ಮಾಹಿತಿಯನ್ನು, ಎಲ್ಲಾ ವಿವರಗಳನ್ನು ಹಾಗೂ ಎಲ್ಲಾ ಪೂರಕ ದಾಖಲೆಗಳನ್ನು ವೀಕ್ಷಿಸಿ (View ಮಾಡಿ), ಸದರಿ ಮಾಹಿತಿ, ವಿವರಗಳು ಮತ್ತು ಪೂರಕ ದಾಖಲೆಗಳು ನೈಜತೆಯಿಂದ ಕೂಡಿರುತ್ತದೆ / ಸತ್ಯವಾಗಿರುತ್ತದೆ ಎಂದು, ಒಂದು ವೇಳೆ ಪ್ರಸ್ತುತ ಮತ್ತು ಭವಿಷ್ಯದಲ್ಲಿ ಸದರಿ ಮಾಹಿತಿ, ವಿವರಗಳು ಮತ್ತು ಪೂರಕ ದಾಖಲೆಗಳು ನೈಜತೆಯಿಂದ ಕೂಡಿಲ್ಲದಿರುವುದು ಹಾಗೂ ಅಸತ್ಯವಾಗಿರುವುದು ಕಂಡುಬಂದಲ್ಲಿ / ಸಾಬೀತಾದಲ್ಲಿ ಅಂತಹ ಪ್ರಕರಣದಲ್ಲಿ ನಿಯಮಾನುಸಾರ ಶಿಸ್ತುಕ್ರಮಕ್ಕೆ ಅರ್ಹರಿರುವುದಾಗಿ ಸ್ವಯಂ ದೃಢೀಕರಣವನ್ನು ಕಡ್ಡಾಯವಾಗಿ ಖುದ್ದು ಅರ್ಜಿದಾರರು ಅರ್ಜಿಯ ಕೊನೆಯಲ್ಲಿ ನೀಡತಕ್ಕದ್ದು. ಅದರೊಂದಿಗೆ ಈ ಅಂಶಗಳನ್ನು ಆಯಾ ಶಾಲಾ ಮುಖ್ಯ ಶಿಕ್ಷಕ / ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳಿಂದ (ಶಿಕ್ಷಕರ/ವಿಶೇಷ ಶಿಕ್ಷಕರ ಪ್ರಕರಣದಲ್ಲಿ) / ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ (ಮುಖ್ಯ ಶಿಕ್ಷಕರ ಪ್ರಕರಣದಲ್ಲಿ) ದೃಢೀಕರಣವನ್ನು ಖುದ್ದು ಅರ್ಜಿದಾರರು ಪಡೆದು, ಪಿ.ಡಿ.ಎಫ್ ಮಾದರಿಯಲ್ಲಿ ಸದರಿ ಅರ್ಜಿಯ ಕೊನೆಯಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು. ಅಂತಿಮವಾಗಿ ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಕೆಯಾದ (Submit) ಆದ ನಂತರ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿ ಪಡಿಸಲು ಅರ್ಜಿದಾರರ ಇ.ಇ.ಡಿ.ಎಸ್‌ನಲ್ಲಿನ ಮೊಬೈಲ್ ಸಂಖ್ಯೆಗೆ ಸಂದೇಶ (ಎಸ್.ಎಂ.ಎಸ್) ಬರುತ್ತದೆ.

06. ಒಂದು ವೇಳೆ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಯಾವುದಾದರೂ ಮಾಹಿತಿ ಅಥವಾ ದಾಖಲೆ ಬಿಟ್ಟುಹೋಗಿದ್ದಲ್ಲಿ, ಅಂತಹ ಸಂದರ್ಭದಲ್ಲಿ ಅರ್ಜಿದಾರರ ಲಿಖಿತ ಕೋರಿಕೆಯ ಮೇರೆಗೆ ಒಂದು ಬಾರಿ ಮಾತ್ರ ಅಂತಹ ಅರ್ಜಿಯನ್ನು / ಪ್ರಸ್ತಾವನೆಯನ್ನು ವಾಪಸ್ಸು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅರ್ಜಿದಾರರ ಲಿಖಿತ ಕೋರಿಕೆಯನ್ನು

ಆಧರಿಸಿ, ಈ ಕಛೇರಿಗೆ teacheraward2024@ gmail.com ಈ ಇ-ಮೇಲ್ ಮೂಲಕ ಮನವಿಯನ್ನು ಸಲ್ಲಿಸಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಅವಧಿಯಲ್ಲಿ ಕಡ್ಡಾಯವಾಗಿ ಪೂರ್ಣಗೊಳಿಸಬೇಕು.

07. ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಸಂದೇಹಗಳುಂಟಾದಲ್ಲಿ / ಅಡಚಣೆ ಉಂಟಾದಲ್ಲಿ / ತಾಂತ್ರಿಕ ಸ್ವರೂಪದ ಮಾರ್ಗದರ್ಶನದ ಅವಶ್ಯಕತೆ ಇದ್ದಲ್ಲಿ, ಇ-ಮೇಲ್ ವಿಳಾಸ teacheraward2024@ gmail.com ಅನ್ನು ಸಂಪರ್ಕಿಸುವುದು.

2024-25 ನೇ ಸಾಲಿನ " ರಾಜ್ಯ ಮಟ್ಟದ ಉತ್ತಮ ಶಿಕ್ಷಕ " ಪ್ರಶಸ್ತಿಗೆ ಆಯಾ ಜಿಲ್ಲೆಗಳ ಅತ್ಯುತ್ತಮ ಶಿಕ್ಷಕರು, ವಿಶೇಷ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಮೇಲ್ಕಂಡಂತೆ ಅರ್ಜಿಗಳನ್ನು ಸಲ್ಲಿಸುವುದನ್ನು ಪ್ರೋತ್ಸಾಹಿಸಲು ಸಂಬಂಧಿಸಿದ ಇಲಾಖಾಧಿಕಾರಿಗಳು ಕೆಳಕಂಡ ಕ್ರಮಗಳನ್ನು ವಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

1. ರಾಜ್ಯದ ಎಲ್ಲಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿ.ಟಿ.ಇ)ಗಳ ಪ್ರಾಂಶುಪಾಲರು, ಉಪನಿರ್ದೇಶಕರು, ಆಡಳಿತ/ಅಭಿವೃದ್ಧಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪ್ರಾಂಶುಪಾಲರು, ಶಿಕ್ಷಕರ ತರಬೇತಿ ಕೇಂದ್ರ (ಟಿ.ಟಿ.ಐ), ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು, ಶಾಲಾ ಉಸ್ತುವಾರಿ ಅಧಿಕಾರಿಗಳು ಮತ್ತು ಎಲ್ಲಾ ಶಾಲೆಗಳ ಮುಖ್ಯಸ್ಥರು ತಮ್ಮ-ತಮ್ಮ ವ್ಯಾಪ್ತಿಯಲ್ಲಿನ ಶಿಕ್ಷಕರಿಗೆ, ವಿಶೇಷ ಶಿಕ್ಷಕರಿಗೆ, ಮುಖ್ಯ ಶಿಕ್ಷಕರಿಗೆ 2024-25 ನೇ ಸಾಲಿನ " ರಾಜ್ಯ ಮಟ್ಟದ ಉತ್ತಮ ಶಿಕ್ಷಕ " ಪ್ರಶಸ್ತಿಗೆ ದಿನಾಂಕ: 03-08-2024 ರಿಂದ 16-08-2024 ರವರೆಗೆ ಮೇಲ್ಕಂಡಂತೆ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಬಗ್ಗೆ ವ್ಯಾಪಕ ಪ್ರಚಾರದ ಮೂಲಕ, ಆಂದೋಲನದ ಮೂಲಕ, ಶಾಲಾ ಉಸ್ತುವಾರಿ ಅಧಿಕಾರಿಗಳ ಮೂಲಕ, ಖುದ್ದಾಗಿ ಹಾಗೂ ಕಛೇರಿ ಸೂಚನಾ ಫಲಕಯಲ್ಲಿ ಅಳವಡಿಸುವುದರ ಮೂಲಕ ಗಮನಕ್ಕೆ ತರುವುದು. ಮೇಲ್ಕಂಡ ಕ್ರಮ ಸಂಖ್ಯೆ 1 ರಿಂದ 7 ರವರೆಗಿನ ಅಂಶಗಳನ್ನು ಅನುಸರಿಸಿ ಸದರಿಯವರು ನಿಗದಿತ ಅವಧಿಯೊಳಗೆ ಸುಸೂತ್ರವಾಗಿ ಅರ್ಜಿ ಸಲ್ಲಿಸಲು ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡಲು ನಿಯಮಾನುಸಾರ ಸೂಕ್ತ ಕ್ರಮಗಳನ್ನು ವಹಿಸಲು ತಿಳಿಸಿದೆ.
2. ಮೇಲ್ಕಂಡ ಎಲ್ಲಾ ಅರ್ಹತೆಗಳು ಇದ್ದೂ ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಉತ್ಸಾಹ ತೋರದಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ, ವಿಶೇಷ ಶಿಕ್ಷಕರ ಮತ್ತು ಮುಖ್ಯ ಶಿಕ್ಷಕರನ್ನು ಗುರುತಿಸಿ, ಸಂಬಂಧಿಸಿದ ಶಾಲಾ ಮುಖ್ಯಸ್ಥರು, ಶಾಲಾ ಉಸ್ತುವಾರಿ ಅಧಿಕಾರಿಗಳು, ಸಂಬಂಧಿಸಿದ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು(ಆಡಳಿತ) ಹಾಗೂ ಡಯಟ್ ಉಪನ್ಯಾಸಕರು ಮತ್ತು ಪ್ರಾಂಶುಪಾಲರು ಸದರಿ ಅರ್ಜಿದಾರರಿಗೆ ಉತ್ಸಾಹ ತುಂಬಿ ಮತ್ತು ಹುರಿದುಂಬಿಸಿ ಅರ್ಜಿ ಸಲ್ಲಿಸಲು ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡುವ ಮೂಲಕ ಅಗತ್ಯ ಪ್ರೋತ್ಸಾಹಕ ಕ್ರಮಗಳನ್ನು ಸಕಾಲದಲ್ಲಿ ವಹಿಸುವಂತೆ ಸದರಿ ಅಧಿಕಾರಿಗಳಿಗೆ ತಿಳಿಸಲಾಗಿದೆ.
3. ಈ ಸಂಬಂಧ ಸದರಿ ಕಛೇರಿಗಳಲ್ಲಿ ಅದರಲ್ಲೂ ಮುಖ್ಯವಾಗಿ ಆಯಾ ಡಯಟ್‌ಗಳಲ್ಲಿ ಸಹಾಯ ಕೇಂದ್ರ (Help desk) ಗಳನ್ನು ಈ ಪ್ರಕ್ರಿಯೆ ಅಂತ್ಯದವರೆಗೂ ತೆರೆಯಲು

ಹಾಗೂ ಓರ್ವ ನುರಿತ ಮತ್ತು ನಿಷ್ಪಕ್ಷಪಾತವಾದ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನು ನೇಮಿಸಿ, ಆಯಾ ಜಿಲ್ಲಾ ವ್ಯಾಪ್ತಿಯ ಎಲ್ಲಾ ಅರ್ಹ ಶಿಕ್ಷಕರಿಗೆ, ವಿಶೇಷ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರಿಗೆ ಈ ಕುರಿತಾದ ಮಾಹಿತಿ ದೊರೆತಿರುವುದನ್ನು ಖಾತರಿಪಡಿಸಿಕೊಂಡು ಸದರಿಯವರು ಮೇಲ್ಕಂಡಂತೆ ಅರ್ಜಿ ಸಲ್ಲಿಸಲು ಪ್ರೇರಣೆ ನೀಡಲು ಅಗತ್ಯ ಕ್ರಮಗಳನ್ನು ವಹಿಸಲು ಹಾಗೂ ಈ ಸಂಬಂಧ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡಲು ಮತ್ತು ಸದರಿ ನೋಡಲ್ ಅಧಿಕಾರಿಗಳು ಹಾಗೂ ಸಂಬಂಧಿಸಿದ ಇಲಾಖಾಧಿಕಾರಿಗಳು ಈ ಪ್ರಕ್ರಿಯೆಯನ್ನು ನಿರಂತರ ಅನುಪಾಲನೆ ಮಾಡಲು ನಿಯಮಾನುಸಾರ ಸೂಕ್ತ ಕ್ರಮಗಳನ್ನು ಸಕಾಲದಲ್ಲಿ ವಹಿಸುವಂತೆ ಮೇಲ್ಕಂಡ ಎಲ್ಲಾ ಇಲಾಖಾಧಿಕಾರಿಗಳಿಗೆ ಈ ಮೂಲಕ ತಿಳಿಸಲಾಗಿದೆ.

4. ಮುಂದುವರೆದು, ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದಲ್ಲಿ, ಅಪರ ಆಯುಕ್ತರ ಕಛೇರಿ ಹಂತದಲ್ಲಿ ಮತ್ತು ಆಯಾ ವಿಭಾಗೀಯ ಸಹನಿರ್ದೇಶಕರ ಕಛೇರಿಗಳ ಹಂತದಲ್ಲಿ ಸಹಾಯ ಕೇಂದ್ರ (Help desk) ಗಳನ್ನು ಈ ಪ್ರಕ್ರಿಯೆ ಅಂತ್ಯದವರೆಗೂ ತೆರೆಯಲು ಹಾಗೂ ಓರ್ವ ನುರಿತ ಮತ್ತು ನಿಷ್ಪಕ್ಷಪಾತವಾದ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು, ಅಧೀನ ಕಛೇರಿಗಳ ಅಧಿಕಾರಿಗಳಿಗೆ ಹಾಗೂ ಅರ್ಹ ಅರ್ಜಿದಾರರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡಲು ಹಾಗೂ ಸದರಿ ನೋಡಲ್ ಅಧಿಕಾರಿಗಳು ಹಾಗೂ ಇಲಾಖಾಧಿಕಾರಿಗಳು ನಿರಂತರ ಅನುಪಾಲನೆ ಮಾಡಿ ರಾಜ್ಯದ ಪ್ರತಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸ್ತಾವನೆಗಳು ಸಲ್ಲಿಕೆಯಾಗುವ ನಿಟ್ಟಿನಲ್ಲಿ ಸದರಿ ಅಧೀನ ಅಧಿಕಾರಿಗಳಿಗೆ ಕಾಲಕಾಲಕ್ಕೆ ಅಗತ್ಯ ನಿರ್ದೇಶನಗಳನ್ನು ನೀಡಲು ಹಾಗೂ ಮೇಲುಸ್ತುವಾರಿ ಮಾಡಲು ನಿಯಮಾನುಸಾರ ಅಗತ್ಯ ಕ್ರಮಗಳನ್ನು ಸಕಾಲದಲ್ಲಿ ವಹಿಸುವಂತೆ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ., ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು., ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ ಹಾಗೂ ಉಪನಿರ್ದೇಶಕರು, ಕ.ರಾ.ಶಿ.ಕ.ನಿಧಿ, ಬೆಂಗಳೂರು ಇವರುಗಳಿಗೆ ತಿಳಿಸಲಾಗಿದೆ.

5. ವಿವಿಧ ಹಂತಗಳ ಆಯ್ಕೆ ಸಮಿತಿಗಳ ಕುರಿತಾದ ಇತರ ಅಂಶಗಳನ್ನು ತದನಂತರ ತಿಳಿಸಲಾಗುವುದು.

**ವಿ.ಸೂ:-ಮೇಲ್ಕಂಡ ಅಂಶಗಳಲ್ಲಿ ಸಂದರ್ಭಾನುಸಾರ ಬದಲಾವಣೆಗಳನ್ನು ತರುವ ಅಧಿಕಾರವನ್ನು ಶಾಲಾ ಶಿಕ್ಷಣ ಇಲಾಖೆ ಹಾಗೂ ಸರ್ಕಾರ ಕಾಯ್ದಿರಿಸಿಕೊಂಡಿರುತ್ತದೆ.**

**(ಅಡಕ: ಬಳಕೆದಾರರ ಕೈಪಿಡಿ (USER MANUAL) & ಅನುಬಂಧ-01 ರ ಪ್ರತಿಗಳು).**

೩೦.೧೦.೨೦೨೦

ಬಿ.ಬಿ. ಕಾವೇರಿ., ಭಾ.ಆ.ಸೇ
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

**ಇವರಿಗೆ:**

1. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ.

2. ನಿದೇಶಕರು, ಪ್ರೌಢ ಶಿಕ್ಷಣ / ಮೈನಾರಿಟಿ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., 100 ಅಡಿ ರಿಂಗ್ ರಸ್ತೆ, ಬನಶಂಕರಿ, ಹೊಸಕೆರೆ ಹಳ್ಳಿ ಕ್ರಾಸ್, ಬೆಂಗಳೂರು – 560 085.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
5. ವಿಭಾಗೀಯ ಸಹನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ
6. ರಾಜ್ಯದ ಎಲ್ಲಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳ(ಸಿ.ಟಿ.ಇ) ಗಳ ಪ್ರಾಂಶುಪಾಲರು ಮತ್ತು ಪದನಿಮಿತ್ತ ಸಹ ನಿರ್ದೇಶಕರು.
7. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) & ಉಪನಿರ್ದೇಶಕರು (ಅಭಿವೃದ್ಧಿ), ಶಾಲಾ ಶಿಕ್ಷಣ ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
8. ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ.ಜಿ ರಸೆ, ಬೆಂಗಳೂರು.
9. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
10. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ಇವರುಗಳಿಗೆ (ಆಯಾ ಉಪನಿರ್ದೇಶಕರು (ಆಡಳಿತ)ರವರ ಮೂಲಕ) ಅಗತ್ಯ ಕ್ರಮಕ್ಕಾಗಿ.
11. ರಾಜ್ಯದ ಎಲ್ಲಾ ಶಿಕ್ಷಕರ ತರಬೇತಿ ಕೇಂದ್ರಗಳ ಪ್ರಾಂಶುಪಾಲರಿಗೆ.
12. ಈ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು (ಇ–ಆಡಳಿತ ಘಟಕ), ಇವರಿಗೆ ಕಳುಹಿಸುತ್ತಾ, ಈ ಸುತ್ತೋಲೆಯನ್ನು ಹಾಗೂ ರಾಜ್ಯ ಪ್ರಶಸ್ತಿ ಕುರಿತಾದ ಕೊಂಡಿ(ಲಿಂಕ್)ಯನ್ನು ಇಲಾಖಾ ಅಂತರ್ಜಾಲ ತಾಣದ ಮುಖ ಪುಟದಲ್ಲಿ ಕಾಣುವಂತೆ ಅಳವಡಿಸಲು ಮತ್ತು ಸಂಪೂರ್ಣ ಪ್ರಕ್ರಿಯೆಯನ್ನು ಆನ್–ಲೈನ್ ಮೂಲಕ ಯಶಸ್ವಿಯಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸಲು ಸೂಚಿಸಿದೆ.
13. ಹಿರಿಯ ಸಹಾಯಕ ನಿರ್ದೇಶಕರು (ಸಾರ್ವಜನಿಕ ಸಂಪರ್ಕ ಮತ್ತು ಶಿಕ್ಷಣ ವಾರ್ತೆ) ಇವರಿಗೆ ಕಳುಹಿಸುತ್ತಾ, ಶಿಕ್ಷಣ ವಾರ್ತೆಯ ಜುಲೈ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಎಲ್ಲಾ ಮುದ್ರಣ & ವಿದ್ಯುನ್ಮಾನ ಮಾಧ್ಯಮದ ಮೂಲಕ ವ್ಯಾಪಕ ಪ್ರಚಾರ ನೀಡಲು ಸೂಕ್ತ ಕ್ರಮವಹಿಸಲು ತಿಳಿಸಿದೆ.
14. ರಾಜ್ಯದ ಎಲ್ಲಾ ಶಿಕ್ಷಕರಿಗೆ, ವಿಶೇಷ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರಿಗೆ (ಆಯಾ ಶಾಲಾ ಮುಖ್ಯಸ್ಥರ, ಶಾಲಾ ಉಸ್ತುವಾರಿ ಅಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ).

ಪ್ರತಿಯನ್ನು ಮಾಹಿತಿಗಾಗಿ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ವಂದನಾ ಪೂರ್ವಕವಾಗಿ ಕಳುಹಿಸುತ್ತಾ, ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ತಿಳಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
5. ಶಾಲಾ ಶಿಕ್ಷಣ ಇಲಾಖೆಯ ಉಳಿದ ಎಲ್ಲಾ ನಿರ್ದೇಶಕರಿಗೆ.
6. ಜಂಟಿ ನಿರ್ದೇಶಕರು,(ಆಡಳಿತ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ,**

1. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಉಪ ಪ್ರಾಂಶುಪಾಲರ & ಮುಖ್ಯ ಶಿಕ್ಷಕರ ಸಂಘ, ಬೆಂಗಳೂರು.
2. ಅಧ್ಯಕ್ಷರು, ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ, ಬೆಂಗಳೂರು.
3. ಅಧ್ಯಕ್ಷರು, ಸರ್ಕಾರಿ ಗ್ರೇಡ್-1 ದೈಹಿಕ ಶಿಕ್ಷಕರ ಸಂಘ, ಬೆಂಗಳೂರು.
4. ಅಧ್ಯಕ್ಷರು, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.
5. ಅಧ್ಯಕ್ಷರು, ಕರ್ನಾಟಕ ರಾಜ್ಯ (6-8) ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘ, ಬೆಂಗಳೂರು.
6. ಅಧ್ಯಕ್ಷರು, ಸರ್ಕಾರಿ ಪ್ರಾಥಮಿಕ ಶಾಲಾ ಗ್ರೇಡ್-2 ದೈಹಿಕ ಶಿಕ್ಷಕರ ಸಂಘ, ಬೆಂಗಳೂರು.
7. **ಈ ಸುತ್ತೋಲೆಯು ಶಾಲಾ ಶಿಕ್ಷಣ ಇಲಾಖೆಯ ಅಂತರ್ಜಾಲ ತಾಣ (http://www.schooleducation.kar. nic.in) ದಲ್ಲಿ ಲಭ್ಯವಿರುತ್ತದೆ.**
8. ಕಛೇರಿ ಪ್ರತಿ.

# ಅನುಬಂಧ-1.

## ಉತ್ತಮ ಶಿಕ್ಷಕರ ಪ್ರಶಸ್ತಿಗೆ ಅರ್ಜಿ ನಮೂನೆ

## ಶಿಕ್ಷಕರ ಮಾಹಿತಿ

1. ಶಾಲೆಯ ವಿಧ : ( ಸರ್ಕಾರಿ ಪ್ರಾಥಮಿಕ/ಸರ್ಕಾರಿ ಪ್ರೌಢ/ ಅನುದಾನಿತ ಪ್ರಾಥಮಿಕ/ಅನುದಾನಿತ ಪ್ರೌಢ)
2. ಕೆ.ಜಿ.ಐ.ಡಿ ಸಂಖ್ಯೆ / ಎಲ್.ಐ.ಸಿ ಸಂಖ್ಯೆ
3. ಶಿಕ್ಷಕರ ಹೆಸರು:
4. ಜನ್ಮ ದಿನಾಂಕ:
5. ಲಿಂಗ: ಮಹಿಳೆ / ಪುರುಷ
6. ಪದನಾಮ:
7. ಬೋಧನಾ ವಿಷಯ:
8. ಆಧಾರ್ ಸಂಖ್ಯೆ:
9. ಪ್ರಸ್ತುತ ಕಾರ್ಯ ಸ್ಥಳದ ವಿವರ

| ಜಿಲ್ಲೆ | ಬ್ಲಾಕ್ | ಡೈಸ್ ಸಂಕೇತ | ಶಾಲೆಯ ಹೆಸರು |
|---|---|---|---|
| | | | |

10. ಸೇವೆಗೆ ಸೇರಿದ ದಿನಾಂಕ:
11. ಪ್ರಸ್ತುತ ವೃಂದ(ಹುದ್ದೆ)ಕ್ಕೆ ಬಂದ ದಿನಾಂಕ:
12. ಪ್ರಸ್ತುತ ಶಾಲೆಗೆ ಬಂದ ದಿನಾಂಕ:

## ಸಂಪರ್ಕ ವಿವರ

1. ವಿಳಾಸ:
2. ಮೊಬೈಲ್ ಸಂಖ್ಯೆ:
3. ಪರ್ಯಾಯ ಮೊಬೈಲ್ ಸಂಖ್ಯೆ :
4. ಇ-ಮೇಲ್ ವಿಳಾಸ:

### ಸೇವಾ ವಿವರ

1. ಒಟ್ಟು ಸೇವಾವಧಿ: (ವರ್ಷ/ತಿಂಗಳು/ದಿನಗಳು)

1(ಎ) ಬೋಧನಾ ಕಾರ್ಯದ ಸೇವಾವಧಿ (ಶಾಲಾ ಸೇವಾವಧಿ) :

1(ಬಿ) ಆಡಳಿತಾತ್ಮಕ ಕಾರ್ಯದ ಸೇವಾವಧಿ (ಶಾಲೆಯನ್ನು ಹೊರತುಪಡಿಸಿ):-

2. ವಿದ್ಯಾರ್ಥಿ ದಾಖಲಾತಿ:

| ವರ್ಷ | ಜಿಲ್ಲೆ | ಬ್ಲಾಕ್ | ಶಾಲೆಯ ಹೆಸರು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|
| 2020-21 | | | | |
| 2021-22 | | | | |
| 2022-23 | | | | |
| 2023-24 | | | | |
| 2024-25 | | | | |

3. ಬೋಧನಾ ವಿಷಯಗಳ ವಿವರ

| ವರ್ಷ | ಶಾಲೆ | ಬೋಧನಾ ವಿಷಯ | ತರಗತಿಗಳು |
|---|---|---|---|
| 2020-21 | | | |
| 2021-22 | | | |
| 2022-23 | | | |
| 2023-24 | | | |
| 2024-25 | | | |

4. ಶೈಕ್ಷಣಿಕ ಫಲಿತಾಂಶ: ವಾರ್ಷಿಕ ಪರೀಕ್ಷೆ/CSAS (ಪ್ರಾ.ಶಾಲೆ) /SSLC ಪರೀಕ್ಷೆ (ಪ್ರೌಢ ಶಾಲೆ) (ಕನಿಷ್ಠ 5 ವರ್ಷಗಳು)

| ವರ್ಷ | ಶಾಲೆ | ತರಗತಿ | ಬೋಧನಾ ವಿಷಯ | ಶಾಲಾ ಫಲಿತಾಂಶ | ಬೋಧಿಸುತ್ತಿರುವ ವಿಷಯಗಳಲ್ಲಿ |
|---|---|---|---|---|---|
| 2019-20 | | | | | |
| 2020-21 | | | | | |
| 2021-22 | | | | | |
| 2022-23 | | | | | |
| 2023-24 | | | | | |

ದೈಹಿಕ ಮತ್ತು ವಿಶೇಷ ಶಿಕ್ಷಕರಿಗೆ(ವೃತ್ತಿ ಶಿಕ್ಷಣ)

| ವರ್ಷ | ಚಟುವಟಿಕೆ/ ಕ್ರೀಡೆ | ತಾಲ್ಲೂಕು ಹಂತ | ಜಿಲ್ಲಾ ಹಂತ | ವಿಭಾಗೀಯ ಹಂತ | ರಾಜ್ಯ ಹಂತ | ರಾಷ್ಟ್ರ ಹಂತ | ಅಂತರಾಷ್ಟ್ರೀಯ ಹಂತ |
|---|---|---|---|---|---|---|---|
| 2019-20 | | | | | | | |
| 2020-21 | | | | | | | |
| 2021-22 | | | | | | | |
| 2022-23 | | | | | | | |
| 2023-24 | | | | | | | |

Text Box

Supporting Document Upload

Supporting Video upload (URL)

5. ಇತರೆ ಜವಾಬ್ದಾರಿಗಳು :

Document Upload

6. ಇತರೆ ವಿವರಗಳು:

Document Upload

## ಅರ್ಜಿ ಸಲ್ಲಿಸುವ ಪ್ರಕ್ರಿಯೆ

### ಭಾಗ-1 ವಸ್ತುನಿಷ್ಠ ಮಾನದಂಡಗಳು

1 .ಕಳೆದ 3 ವರ್ಷಗಳಲ್ಲಿ ರಾಜ್ಯ, ರಾಷ್ಟ್ರ, ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿದ ಸಂಶೋಧನಾ ಪ್ರಬಂಧ, ಲೇಖನ, ಪುಸ್ತಕಗಳು, ಭಾಗವಹಿಸಿದ ವಿಚಾರಗೋಷ್ಠಿಗಳು, ವಸ್ತುಪ್ರದರ್ಶನದ ವಿವರ

| ಮಟ್ಟ | ವಿವರ | ಷರಾ |
|---|---|---|
| ಅಂತರಾಷ್ಟ್ರೀಯ ಮಟ್ಟ | | |
| ರಾಷ್ಟ್ರ ಮಟ್ಟ | | |
| ರಾಜ್ಯ ಮಟ್ಟ | | |
| ಜಿಲ್ಲಾಮಟ್ಟ | | |

Supporting Document Upload Supporting Video upload (URL)

2 . ಸೇವಾನಿರತ ತರಬೇತಿ (ಕಳೆದ 3 ವರ್ಷಗಳ ಮಾಹಿತಿ)

| ಕ್ರ.ಸಂ. | ತರಬೇತಿಯ ವಿವರ | ತರಬೇತಿಯ ಅವಧಿ (≥5 ದಿನಗಳು) | ಸಂಸ್ಥೆಯ ವಿವರ |
|---|---|---|---|
| | | | |
| | | | |
| | | | |

3 . ಕಳೆದ 3 ವರ್ಷಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಹಾಗೂ ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟಲು ಶಿಕ್ಷಕರು ಕೈಗೊಂಡ ಕ್ರಮಗಳು:-

Supporting Document Upload Supporting Video upload (URL)

4 . ಪಡೆದಿರುವ ಹೆಚ್ಚಿನ ವಿದ್ಯಾರ್ಹತೆ ಮತ್ತು ಅದರಿಂದ ನಿಮ್ಮ ವೃತ್ತಿಜೀವನದಲ್ಲಿ ಉಂಟಾದ ಧನಾತ್ಮಕ ಪರಿಣಾಮ:

Document upload

5. ಕಳೆದ 3 ವರ್ಷಗಳಲ್ಲಿ DSERT/BOARD & NCERT ಗೆ ಇ-ಕಂಟೆಂಟ್, ಪಠ್ಯಪುಸ್ತಕ, ಶಿಕ್ಷಕರ ಕೈಪಿಡಿಗಳನ್ನು ಅಭಿವೃದ್ಧಿ ಪಡಿಸಲು ಸಕ್ರಿಯ ಭಾಗವಹಿಸುವಿಕೆ

| | **NCERT** | **DSERT** | **KSEEB** | **KTBS** |
|---|---|---|---|---|
| ಇ-ಕಂಟೆಂಟ್ | | | | |
| ಪಠ್ಯಪುಸ್ತಕ | | | | |
| ಶಿಕ್ಷಕರ ಕೈಪಿಡಿ | | | | |

Supporting Document Upload Supporting Video upload (URL)

## ಭಾಗ-2 ಕಾರ್ಯಕ್ಷಮತೆ ಆಧಾರಿತ ಮಾನದಂಡಗಳು

1. ಕಳೆದ 3 ವರ್ಷಗಳಲ್ಲಿ ಶಿಕ್ಷಕರು ತಮ್ಮ ಬೋಧನೆಯಲ್ಲಿ ಅತಿ ಹೆಚ್ಚು ಪ್ರಭಾವ ಬೀರಲು ಕೈಗೊಂಡ ನಾವಿನ್ಯಯುತ ಪ್ರಯೋಗಗಳು ( ಉದಾ: ಐ.ಸಿ.ಟಿ ಬಳಕೆ, ಸಂತಸದಾಯಕ ಕಲಿಕೆಯ ತಂತ್ರಗಳು, ಪರಿಣಾಮಕಾರಿ ಬೋಧನಾವಿಧಾನಗಳು) ಬೋಧನಾವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಮತ್ತು ಪ್ರಚುರಪಡಿಸಿರುವುದು, ತಮ್ಮ ದೈನಂದಿನ ಬೋಧನಾ ಪ್ರಕ್ರಿಯೆಯಲ್ಲಿ ಸೂಕ್ತ ಬೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಬೋಧನಾ ಕಲಿಕಾ ಸಾಮಗ್ರಿಗಳನ್ನುಕಡಿಮೆ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿರುವುದು

| ಕ್ರ.ಸಂ | ನಾವೀನ್ಯಯುತ ಚಟುವಟಿಕೆ | ಧನಾತ್ಮಕ ಪರಿಣಾಮ |
|---|---|---|
| | | |
| | | |
| | | |
| | | |

Supporting Document Upload Supporting Video upload (URL)

2 (ಎ) CWSN ಮಕ್ಕಳ ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಮ್ಮಿಕೊಂಡಿರುವ ವಿಶೇಷ ಚಟುವಟಿಕೆಗಳು

| ಕ್ರ.ಸಂ | CWSN ಮಕ್ಕಳ ಶಿಕ್ಷಣ | | ಹೆಣ್ಣುಮಕ್ಕಳ ಶಿಕ್ಷಣ | |
|---|---|---|---|---|
| | ಚಟುವಟಿಕೆಗಳು | ಪರಿಣಾಮ | ಚಟುವಟಿಕೆಗಳು | ಪರಿಣಾಮ |
| | | | | |
| | | | | |

Supporting Document Upload Supporting Video upload (URL)

2(ಬಿ).ಶಿಕ್ಷಕರ ಮಾರ್ಗದರ್ಶನದಲ್ಲಿ ವಿವಿಧ ಹಂತದಲ್ಲಿ (ರಾಜ್ಯ/ವಿಭಾಗ/ಜಿಲ್ಲೆ/ತಾಲ್ಲೂಕು) ಆಯೋಜಿಸಿದ ವಿಶೇಷ ಹಾಗೂ ಸಹಪಠ್ಯ ಚಟುವಟಿಕೆಗಳ ವಿವರ ಮತ್ತು ಅದರ ಧನಾತ್ಮಕ ಪರಿಣಾಮ

| ಕ್ರ.ಸಂ. | ಚಟುವಟಿಕೆಯ ವಿವರ | ಹಂತ | ಧನಾತ್ಮಕ ಪರಿಣಾಮ |
|---|---|---|---|
| | | | |
| | | | |

Supporting Document Upload Supporting Video upload (URL)